'ಓಲ್ಡ್ ವೈನ್ ಇನ್ ಎ ನ್ಯೂ ಬಾಟಲ್' ಎನ್ನುವುದು ಲೋಕಾರೂಢಿ. ಆದರೆ ಇದನ್ನು ಚಾಚೂ ತಪ್ಪದೆ ತನ್ನೊಳಗೆ ಆಹ್ವಾನಿಸಿಕೊಂಡಿದ್ದು ಫ್ಯಾಷನ್ ಲೋಕ. ಹಳೆಯ ವಿನ್ಯಾಸಕ್ಕೆ ಆಧುನಿಕ ಮೆರುಗು ದೊರಕಿಸಿಕೊಡುತ್ತಾ ಫ್ಯಾಷನ್ ಪ್ರೇಮಿಗಳ ಮನ ಗೆಲ್ಲಲು ವಿಭಿನ್ನ ಪ್ರಯತ್ನ ನಡೆಸುತ್ತಲೇ ಇರುತ್ತದೆ ಈ ಕ್ಷೇತ್ರ. ಬ್ರ್ಯಾಂಡ್ ತೆಕ್ಕೆಯೊಳಗಿಂದ ಹೊರಬರುವ ನವೀನ ವಿನ್ಯಾಸಗಳು ಹಳೆಯ ಬೇರುಗಳ ಸತ್ವ ಹೀರಿಕೊಂಡೇ ರೂಪ ತಳೆದಿರುತ್ತವೆ. ಇಂದಿನ ಪ್ರತಿಷ್ಠಿತ ಫ್ಯಾಷನ್ ವೇದಿಕೆಗಳಲ್ಲಿ, ಸಿನಿಮಾ ಪರದೆಗಳಲ್ಲಿ ಮಿಂಚಿ ಮನ್ನಣೆ ಗಳಿಸುತ್ತಿರುವ ಜನಪ್ರಿಯ ವಿನ್ಯಾಸಗಳಲ್ಲಿ ಒಂದಾಗಿರುವ ಟರ್ಟನ್ ವಿನ್ಯಾಸ ನೂರಾರು ವರ್ಷಗಳ ಇತಿಹಾಸದ ಬೆಚ್ಚನೆಯ ಹೊದಿಕೆಯಲ್ಲಿ ಅರಳಿದ್ದೇ ಆಗಿದೆ.

ಚೆಕ್ಸ್ ವಿನ್ಯಾಸ ಯಾರಿಗೇ ತಿಳಿದಿಲ್ಲ. ಮಕ್ಕಳಿಂದ ಹಿಡಿದು ಪುರುಷರು ಮಹಿಳೆಯರು ಧರಿಸುವ ಉಡುಪುಗಳಲ್ಲಿ ಈ ವಿನ್ಯಾಸ ಸಾಮಾನ್ಯ. ಟರ್ಟನ್, ಚೆಕ್ಸ್ ಅಥವಾ ಪ್ಲೇಡ್ ಎನ್ನುವ ಹೆಸರಿನಲ್ಲಿ ಖ್ಯಾತಿ ಪಡೆದಿರುವ ಈ ವಿನ್ಯಾಸ ಉದ್ದ ಹಾಗೂ ಅಡ್ಡನೆಯ ಚಚ್ಚೌಕದ ರೂಪದಲ್ಲಿರುತ್ತದೆ. ಕಪ್ಪು, ಬಿಳಿ ಬಣ್ಣದ ಗೆರೆಗಳು ಚೆಕ್ಸ್ ವಿನ್ಯಾಸವನ್ನು ಆವರಿಸಿಕೊಂಡು ವಿಶೇಷ ಲುಕ್ ನೀಡುತ್ತವೆ. ಕೆಂಪು, ನೀಲಿ, ಕಪ್ಪು, ಹಳದಿ, ಹಸಿರು ಹೀಗೆ ವಿಭಿನ್ನ ಬಣ್ಣದಲ್ಲಿ ಇವುಗಳು ವಿನ್ಯಾಸಗೊಂಡಿರುತ್ತವೆ. ದೇಶ ವಿದೇಶಗಳಲ್ಲಿ ನಡೆಯುವ ಇತ್ತೀಚಿನ ಫ್ಯಾಷನ್ ಷೋಗಳಲ್ಲಿ ಆಧುನಿಕ ರಂಗು ತೊಟ್ಟು ಟರ್ಟನ್ ವಿನ್ಯಾಸ ಭಾರಿ ಸುದ್ದಿ ಮಾಡುತ್ತಿದೆ. ಅಷ್ಟಕ್ಕೂ ಫ್ಯಾಷನ್ ಲೋಕದಿಂದ ತುಸುವೂ ಕಣ್ಮರೆಯಾಗದೆ ಸದಾ ಒಂದಿಲ್ಲೊಂದು ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಸಾಬೀತುಪಡಿಸುತ್ತಲೇ ಬಂದಿರುವ ಇವು ಪುರುಷರ ದಿರಿಸಿನಲ್ಲಿ ಹೆಚ್ಚು ಹಾಸುಹೊಕ್ಕಾಗಿದೆ.

ಕೆಲವು ವರ್ಷಗಳ ಹಿಂದೆ ಮಹಿಳೆಯರು ತೊಡುವ ಶರ್ಟ್‌ಗಳಲ್ಲಿ ಟರ್ಟನ್ ಪದಾರ್ಪಣೆ ಮಾಡಿತ್ತು. ಈ ನಿಟ್ಟಿನಲ್ಲಿ ಜನರ ಒಲವು ಕಂಡೇ ಇರಬೇಕು ಟರ್ಟನ್ ಈಗ ಶರ್ಟ್‌ಗಳಲ್ಲಷ್ಟೇ ಅಲ್ಲ, ಫ್ಯಾಷನ್ ಜಗತ್ತಿನ ಎಲ್ಲಾ ವಿನ್ಯಾಸಗಳಲ್ಲಿಯೂ ಸ್ಥಾನ ಪಡೆದುಕೊಂಡಿದೆ. ಹೆಚ್ಚಾಗಿ ಆಧುನಿಕ ಮೆರುಗಿರುವ ದಿರಿಸುಗಳಿಗೆ ಹೆಚ್ಚಾಗಿ ಹೊಂದಿಕೊಳ್ಳುತ್ತಿರುವ ಇವು ಬ್ಯಾಗ್, ಶೂ, ಟೋಪಿ, ಟೈ, ಕರ್ಟನ್, ಸೋಫಾ ಕವರ್‌ಗಳಲ್ಲಿಯೂ ಪ್ರಧಾನ ವಿನ್ಯಾಸವಾಗಿ ಸ್ಥಾನ ಗಿಟ್ಟಿಸಿವೆ. ಇತ್ತೀಚೆಗೆ ವಾಚ್‌ನ ಬೆಲ್ಟ್‌ಗಳು ಕೂಡ ಟರ್ಟನ್ ವಿನ್ಯಾಸಕ್ಕೆ ಮಾರುಹೋಗಿವೆ.

ಈ ವಿನ್ಯಾಸ ಎಲ್ಲರಿಗೂ ಒಪ್ಪುತ್ತದೆ ಎನ್ನುವುದೇ ಇದರ ವಿಶೇಷ. ಬಣ್ಣ ಹಾಗೂ ವಿನ್ಯಾಸ ಎರಡರಿಂದಲೂ ಆಕರ್ಷಿಸುವ ಇವು ಮಕ್ಕಳ ದಿರಿಸುಗಳಲ್ಲಿಯೂ ವಿಶೇಷ ಹೆಸರು ಮಾಡಿವೆ. ಉಣ್ಣೆಯ ಮೈಕಾಂತಿಯನ್ನು ಮಾತ್ರ ಹೊಂದಿದ್ದ ಟರ್ಟನ್ ದಿನಕಳೆದಂತೆ ಎಲ್ಲ ಬಗೆಯ ಬಟ್ಟೆಯ ಮೈಮಾಟಕ್ಕೂ ಒಗ್ಗಿಕೊಂಡುಬಿಟ್ಟಿದೆ. ಎಲ್ಲ ಬಗೆಯ ಫ್ಯಾಬ್ರಿಕ್ಸ್‌ಗಳಿಗೆ ಒಗ್ಗಿಕೊಂಡಿದ್ದರಿಂದಲೇ ವೈವಿಧ್ಯಪೂರ್ಣ ಶೈಲಿಯ ಉಡುಪುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಸದ್ಯಕ್ಕಂತೂ ಮಾರುಕಟ್ಟೆಯ ಗಲ್ಲಿಗಲ್ಲಿಗಳಲ್ಲಿ ಎಡತಾಕಿದರೆ ಇವೇ ವಿನ್ಯಾಸದ ಆಂಕಲ್ ಲೆಂತ್ ಪ್ಯಾಂಟ್‌ಗಳು ಕಣ್ಣಿಗೆ ರಾಚುತ್ತವೆ.

ಸ್ಕಾಟ್ಲೆಂಡ್‌ನ ಸಾಂಪ್ರದಾಯಿಕ ಹಿನ್ನೆಲೆ ಇರುವ ಟರ್ಟನ್ ವಿನ್ಯಾಸ ಭಾರತೀಯ ಸಾಂಪ್ರದಾಯಿಕ ವಿನ್ಯಾಸಗಳಲ್ಲಿಯೂ ಸ್ಥಾನ ಗಿಟ್ಟಿಸಿಕೊಂಡಿದೆ. ಸೀರೆಗಳಲ್ಲೂ ಚೆಕ್ಸ್ ವಿನ್ಯಾಸ ಮಾಮೂಲಿ. ರೇಷ್ಮೆ, ಬನಾರಸ್, ಕಾಟನ್ ಹೀಗೆ ಎಲ್ಲಾ ಶೈಲಿಯಲ್ಲೂ ಈ ವಿನ್ಯಾಸಕ್ಕೆ ಒತ್ತು ನೀಡಲಾಗಿದೆ. ಯುವಮನಸ್ಸುಗಳಿಗೆ ಸೀರೆಗಳಲ್ಲಿನ ಚೆಕ್ಸ್ ವಿನ್ಯಾಸದ ಕಡೆಗೆ ಆಕರ್ಷಣೆ ಕಡಿಮೆ ಆಗುತ್ತಿದ್ದಂತೆ ಜನಪ್ರಿಯ ಫ್ಯಾಷನ್ ವಿನ್ಯಾಸಕಾರರು ವಿಶೇಷ ವಿನ್ಯಾಸಗಳ ಮಜ್ಜನ ಮಾಡಿ ಮತ್ತೆ ಅವುಗಳಿಗೆ ಹೊಸ ಲುಕ್ ನೀಡಿ ಟ್ರೆಂಡ್‌ನಲ್ಲಿಯೇ ಉಳಿದುಕೊಳ್ಳುವಂತೆ ಮಾಡಿಬಿಡುತ್ತಾರೆ. ಸೀರೆ ಬಾರ್ಡರ್‌ಗಳಿಗೆ ಈ ವಿನ್ಯಾಸ ನೀಡುವ ಟ್ರೆಂಡ್ ಜೋರಾಗಿಯೇ ಇದೆ. ಆದರೆ ಇತ್ತೀಚೆಗೆ ಆಧುನಿಕ ಹಾಗೂ ಇಂಡೊ ವೆಸ್ಟರ್ನ್ ಶೈಲಿಯ ಎಲ್ಲ ರೀತಿಯ ಉಡುಪುಗಳಲ್ಲಿ ಟರ್ಟನ್ ಪುಟಿದೆದ್ದಿದೆ. ಜಾಕೆಟ್, ಟಾಪ್ಸ್, ಚೂಡಿದಾರ್, ಮಿನಿ ಟಾಪ್ಸ್, ಮಿನಿ ಸ್ಕರ್ಟ್ಸ್, ಪಲಾಜೊ, ಜಂಪ್ಸೂಟ್, ಮ್ಯಾಕ್ಸಿ, ಟ್ರೌಸರ್, ಸ್ವೆಟರ್ಸ್... ಎಲ್ಲ ಬಗೆಯ ದಿರಿಸುಗಳಲ್ಲಿಯೂ ಈ ವಿನ್ಯಾಸವನ್ನು ಕಾಣಬಹುದು.

ಮಹಿಳೆಯರ ದಿರಿಸು ವಿನ್ಯಾಸದಲ್ಲಷ್ಟೇ ಅಲ್ಲ ಪುರುಷರು ಉಡುಪುಗಳಿಗೂ ವಿಶೇಷ ಆಸ್ಥೆ ನೀಡುವ ಕಾಲವಿದು. ಹೀಗಾಗಿ ಪುರುಷರ ಫಾರ್ಮಲ್ಸ್ ಹಾಗೂ ಇನ್ಫಾರ್ಮಲ್ ದಿರಿಸುಗಳಲ್ಲಿಯೂ ವಿಶೇಷ ಆಕರ್ಷಣೆ ನೀಡಲಾಗುತ್ತಿದೆ. ಬರ್ಮುಡಾದಿಂದ ಹಿಡಿದು ಬಣ್ಣ ವೈವಿಧ್ಯದ ಪ್ಯಾಂಟ್, ಬ್ಲೇಜರ್, ಜಾಕೆಟ್‌ಗಳು ಮನಸೆಳೆಯುವಂತೆ ವಿನ್ಯಾಸಗೊಂಡಿವೆ. ಸಾಂಪ್ರದಾಯಿಕ ಉಡುಪಿನ ಮೇಲೆ ಧರಿಸುವ ಸ್ಲೀವ್ಲೆಸ್ ಕೋಟ್‌ಗಳೂ ಇದೇ ವಿನ್ಯಾಸ ಹೊದ್ದು ಶ್ರೀಮಂತ ಲುಕ್ ಗಳಿಸಿಕೊಂಡಿವೆ. ನೋಡಿದಷ್ಟೂ ನೋಡಬೇಕು ಎನ್ನುವಷ್ಟು ಕಣ್ ಕೋರೈಸುವ ಚೆಲುವು ಪುರುಷರ ದಿರಿಸಿಗೂ ದಕ್ಕುತ್ತಿದೆ. ಪುರುಷರು ಬಳಸುವ ಸ್ಕಾರ್ಫ್‌ಗಳಲ್ಲಿಯೂ ಇದೇ ವಿನ್ಯಾಸಕ್ಕೆ ಆದ್ಯತೆ. ರಾಜಕಾರಣಿಗಳು ಧರಿಸುವ ಜಾಕೆಟ್, ಶಾಲುಗಳಲ್ಲಿಯೂ ಇದೇ ವಿನ್ಯಾಸ ಮಿಂಚುತ್ತಿರುವುದು ವಿಶೇಷ.

ಒಂದಿಲ್ಲೊಂದು ರೀತಿಯಲ್ಲಿ ನಿರಂತರವಾಗಿ ಎಲ್ಲರಲ್ಲೂ ಒಂದಾಗುತ್ತಲೇ ಇರುವ ಈ ವಿನ್ಯಾಸ ಪ್ರತಿ ಬಾರಿಯು ಹೊಸತನದೊಂದಿಗೆ ಜನರ ಮುಂದೆ ಬಂದು ನಿಲ್ಲುತ್ತಿದೆ. ಫ್ಯಾಬ್ರಿಕ್, ಬಣ್ಣ, ಶೈಲಿ, ಉಡುಪುಗಳ ವಿಶೇಷ ವಿನ್ಯಾಸದ ಮೂಲಕ ಹೊಸತಾಗುತ್ತಾ, ಅಪ್‌ಡೇಟ್ ಆಗುತ್ತಾ ಜನರ ಮನಸ್ಸನ್ನು ಗೆಲ್ಲುತ್ತಲೇ ಇದೆ.

## ಟರ್ಟನ್ ಹುಟ್ಟಿದ್ದು ಹೇಗೆ?

ಟರ್ಟನ್ ವಿನ್ಯಾಸದ ಮೂಲದ ಬಗ್ಗೆ ಸಾಕಷ್ಟು ಗೊಂದಲವಿದ್ದರೂ ಸ್ಕಾಟ್ಲೆಂಡ್‌ನಲ್ಲಿ ಜನ್ಮತಾಳಿದ್ದು ಎನ್ನಲಾಗುತ್ತದೆ. ಉಣ್ಣೆ ಬಟ್ಟೆಯ ನೇಯ್ಗೆ ಮಾಡುವಾಗಲೇ ಈ ವಿನ್ಯಾಸ ರೂಪುಗೊಂಡಿದ್ದು. ಉಣ್ಣೆಯಿಂದ ನಿರ್ಮಿಸುತ್ತಿದ್ದರಿಂದ ಚಳಿಗಾಲಕ್ಕೆ ಹೆಚ್ಚು ಸೂಕ್ತವಾಗುತ್ತಿತ್ತು. ಇದಕ್ಕೆ ಪ್ಲೇಡ್ ವಿನ್ಯಾಸ ಎಂದೂ ಕರೆಯಲಾಗುತ್ತದೆ. ಚಳಿಗಾಲದಲ್ಲಿ ಮೈಯನ್ನು ಬೆಚ್ಚಗಿಡುವ ಶಾಲ್, ಬೆಡ್‌ಶೀಟ್‌ಗಳಾಗಿ ಇವು ಹೆಚ್ಚು ಉಪಯೋಗಗೊಳ್ಳುತ್ತಿದ್ದವು. ಇದು ಸ್ಕಾಟ್ಲೆಂಡಿನ ರಾಷ್ಟ್ರೀಯ ದಿರಿಸಿನ ಚಿಹ್ನೆಯಾಗಿಯೂ ಜನಪ್ರಿಯತೆ ಗಳಿಸಿದೆ. ಸ್ಕಾಟ್ಲೆಂಡಿನ ಪಾರಂಪರಿಕ ನೆಯ್ಗೆಕಾರರು ಮಾತ್ರ ನಿರ್ಮಿಸುತ್ತಿದ್ದ ಈ ಟರ್ಟನ್ ವಿನ್ಯಾಸ ಕ್ರಮೇಣ ಜಾಗತಿಕವಾಗಿಯೂ ಹೆಸರು ಮಾಡಲಾರಂಭಿಸಿತು. ಈಗ ಟರ್ಟನ್ ವಿನ್ಯಾಸ ಕೇವಲ ಜವಳಿ ಉದ್ಯಮಕ್ಕೆ ಸೀಮಿತವಾಗದೆ ಪೇಪರ್, ಪ್ಲಾಸ್ಟಿಕ್, ವಾಲ್ ಡೆಕೊರೇಶನ್, ಪ್ಯಾಕೇಜಿಂಗ್ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಧಾನ ಎನಿಸಿಕೊಂಡಿದೆ.

### ಹೀಗೆ ಧರಿಸಿ...

ಅತಿ ಎನಿಸುವ ವೈಭವ ಈ ವಿನ್ಯಾಸಕ್ಕಿಲ್ಲವಾದರೂ ತನ್ನ ಸರಳ ಹಾಗೂ ಸುಂದರ ರೂಪಿನಿಂದಲೇ ಎಲ್ಲರ ಮನಗೆಲ್ಲುತ್ತಿದೆ ಈ ವಿನ್ಯಾಸ. ಪ್ಲೇನ್ ಹಾಗೂ ಟರ್ಟನ್ ವಿನ್ಯಾಸದ ಸಂಗಮವಿದ್ದರೆ ದಿರಿಸಿನ ಅಂದ ದುಪ್ಪಟ್ಟಾಗುವುದರಲ್ಲಿ ಸಂಶಯವಿಲ್ಲ.

- ಕೆಂಪು ಬಣ್ಣದ ಚೌಕವಿರುವ ಅದಕ್ಕೆ ಕಪ್ಪು ಹಾಗೂ ಬಿಳಿಯ ಗೆರೆಯುಳ್ಳ ಟರ್ಟನ್ ವಿನ್ಯಾಸ ಹೆಚ್ಚು ಜನಪ್ರಿಯ.
- ಟಾಪ್ ಅಥವಾ ಪ್ಯಾಂಟ್‌ನಲ್ಲಿ ಒಂದು ಮಾತ್ರ ಟರ್ಟನ್ ವಿನ್ಯಾಸವಿದ್ದರೂ ಆಕರ್ಷಣೀಯ. ಪ್ಲೇನ್ ಹಾಗೂ ಚೌಕಾಕಾರದ ಕಾಂಬಿನೇಶನ್ ಚೆನ್ನಾಗಿರುತ್ತದೆ.
- ದಿರಿಸಿನ ತುಂಬ ಇದೇ ವಿನ್ಯಾಸವಿದ್ದು, ಚಿಕ್ಕದಾದ ಪ್ಲೇನ್ ಜಾಕೆಟ್ ತೊಟ್ಟರೂ ಚೆನ್ನಾಗಿ ಕಾಣುತ್ತದೆ.

